817 (1585) ಶ್ರೀ ರಮೇಶ್ ಕುಮಾರ್ ಕೆ. ಆರ್. (ಶ್ರೀನಿವಾಸಪುರ): ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ಕೆಎಸ್ಐಐಡಿಸಿ, ಕೆಎಸ್ಎಫ್ಸಿ ಇವುಗಳ ಮುಖಾಂತರ ರಾಜ್ಯದಲ್ಲಿ ನೀಡಿರುವ ಒಟ್ಟು ಸಾಲದ ಮೊತ್ತ ಎಷ್ಟು?

ಆ) ಎಷ್ಟು ಕುಟುಂಬಗಳಿಗೆ ನೀಡಲಾಗಿದೆ ಇವುಗಳ ಪೈಕಿ ಎಷ್ಟು ಸುಸ್ತಿದಾರರಾಗಿದ್ದಾರೆ:

ಇ) ಈ ಸಾಲ ಪಡೆದಿರುವವರ ಪೈಕಿ ವೈಯಕ್ತಿಕವಾಗಿ ಸಾಲ ಪಡೆದುಕೊಂಡಿರುವವರು ಖಾಸಗಿ ನಿಯಮಿತದ ಸಂಸ್ಥೆಗಳ ಮುಖಾಂತರ ಸಾಲ ಪಡೆದಿರುವವರು, ಖಾಸಗಿ ಅನಿಯಮಿತದ ಸಂಸ್ಥೆಗಳಿಂದ ಸಾಲ ಪಡೆದುಕೊಂಡಿರುವವರ ಸಂಖ್ಯೆ ಎಷ್ಟು ?

ಈ) ವಾಣಿಜ್ಯ ಬ್ಯಾಂಕುಗಳ ಮುಖಾಂತರ ರಾಜ್ಯದಲ್ಲಿ ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಚಟುವಟಿಕೆಗಳಿಗೆ ನೀಡಿರುವ ಸಾಲದ ಮೊತ್ತ ಎಷ್ಟು ; ಇದರಿಂದ ಎಷ್ಟು ಕುಟುಂಬಗಳಿಗೆ ನೆರವು ಸಿಕ್ಕಿದೆ; ಇವುಗಳ ಪೈಕಿ ಎಷ್ಟು ಜನರು ಸುಸ್ತಿದಾರರಾಗಿದ್ದಾರೆ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ ಇವುಗಳ ಮುಖಾಂತರ ಕಳೆದ ಮೂರು ಹಣಕಾಸು ವರ್ಷಗಳಲ್ಲಿ ರಾಜ್ಯದಲ್ಲಿ ನೀಡಿರುವ ಒಟ್ಟು ಸಾಲದ ಮೊತ್ತವನ್ನು ಈ ಕೆಳಗೆ ವಿವರಿಸಲಾಗಿದೆ.

	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ		ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ :
	(ಕೋಟಿ ರೂ.ಗಳಲ್ಲಿ)		(ಕೋಟಿ ರೂ.ಗಳಲ್ಲಿ)
ವರ್ಷ	ಮಂಜೂರಾತಿ ಮೊತ್ತ		ಮಂಜೂರಾತಿ ಮೊತ್ತ
2001–02	302.56	–	178.09
2002–03	333.04	–	86.25
2003–04	299.70	–	20.86
ಒಟ್ಟು	**935.30**		**285.20**

ಆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ ಇವುಗಳಿಂದ ಸಾಲ ಪಡೆದುಕೊಂಡ ಘಟಕಗಳ ಮತ್ತು ಸುಸ್ತಿದಾರರ ವಿವರ ಕೆಳಕಂಡಂತಿದೆ :

ಸಂಸ್ಥೆ ಹೆಸರು	ಮಂಜೂರಾದ ಘಟಕ ಸಂಖ್ಯೆ	ಸುಸ್ತಿದಾರರ ಸಂಖ್ಯೆ :
ಕ.ರಾ. ಹ. ಸಂ.	4273	727
ಕೆ. ಎಸ್.ಐ.ಐ.ಡಿ.ಸಿ.	219	99

ಇ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಸಂಯೋಜನೆವಾರು ಮಂಜೂರು ಮಾಡಿರುವ ಘಟಕಗಳ ನೆರವಿನ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

	ಸಂಯೋಜನೆ		ಮಂಜೂರಾತಿ ಕೋಟಿ ರೂ.ಗಳಲ್ಲಿ
		ಸಂಖ್ಯೆ	ಮೊತ್ತ
1.	ಸಾರ್ವಜನಿಕ ನಿಯಮಿತ ಸಂಸ್ಥೆಗಳು	51	63.79
2.	ಖಾಸಗಿ ನಿಯಮಿತ ಸಂಸ್ಥೆಗಳು	356	0.03
3.	ಸಹಕಾರಿ ಸಂಘಗಳು	23	6.27
4.	ಪಾಲುದಾರಿಕೆ ಸಂಸ್ಥೆಗಳು	1439	313.87
5.	ಹಿಂದು ಅವಿಭಕ್ತ ಕುಟುಂಬಗಳು	5	0.97
6.	ಏಕಸ್ವಾಮ್ಯ	2399	300.37
	ಒಟ್ಟು	**4273**	**935.30**

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ಕಳೆದ ಮೂರು ವರ್ಷಗಳಲ್ಲಿ ಸಂಯೋಜನೆವಾರು ಮಂಜೂರು ಮಾಡಿರುವ ಘಟಕಗಳ ನೆರವಿನ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

	ಸಂಯೋಜನೆ		ಮಂಜೂರಾತಿ ಕೋಟಿ ರೂ.ಗಳಲ್ಲಿ	
			ಸಂಖ್ಯೆ	ಮೊತ್ತ
1.	ಸಾರ್ವಜನಿಕ ನಿಯಮಿತ ಸಂಸ್ಥೆಗಳು		87	}
2.	ಖಾಸಗಿ ನಿಯಮಿತ ಸಂಸ್ಥೆಗಳು		88	}
				285.20
3.	ಇತರೆ		44	}
	ಒಟ್ಟು	219	285.20	

ಈ) ವಾಣಿಜ್ಯ ಬ್ಯಾಂಕುಗಳು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವುದಿಲ್ಲವಾದ್ದರಿಂದ ಈ ಮಾಹಿತಿ ದೊರೆಯುವುದಿಲ್ಲ.